ನುಗ್ಗಿ ಬರುತ್ತಿದೆ. ವನ್ಯಜೀವಿ ಛಾಯಾಗ್ರಹಣ ಎಂದರೆ ಕಾಡಿನ ಶುದ್ಧ ತಂಗಾಳಿ ಸವಿದು ಮೂಗು ಚಪ್ಪರಿಸುವುದಲ್ಲ! ಅನೇಕ ಸಲ ಸತ್ತಪ್ರಾಣಿಯ ಘಮಟು ವಾಸನೆಯನ್ನೂ ಸಹಿಸಿಕೊಂಡು ಗಂಟೆಗಟ್ಟಲೆ ನಿಲ್ಲುವ ತಾಕತ್ತು, ಸಂಯಮ ರೂಢಿಸಿಕೊಳ್ಳಬೇಕು.

'ಪಾಪ ಎಲ್ಲೋ ಜಗಳವಾಡಿ ಬಲ ಕಿವಿ ಮುರಿದು ಕೊಂಡಿದ್ದಾನೆ ಸರ್' ಎಂದು ನೋವಿನಿಂದ ನುಡಿದರು ಅಕ್ಷತಾ. ಅರಣ್ಯ ಇಲಾಖೆಯಲ್ಲಿ ಇಲ್ಲೀತನಕ ನಾ ಕಂಡ ನಗುಮೊಗದ ದಿಟ್ಟ ಹೆಣ್ಣುಮಗಳು ಈ ಅಕ್ಷತಾ. ಕಾಡಿನ ಬಗ್ಗೆ, ಪ್ರಾಣಿ- ಪಕ್ಷಿಗಳ ಬಗ್ಗೆ ತುಂಬಾ ಉತ್ಸಾಹ ಮತ್ತು ಆಸಕ್ತಿ ಇರುವಾಕೆ. 'ಈ ವಿಶೇಷ ಚಿರತೆಗೆ ಒಂದು ಹೆಸರಿಡಬೇಕಲ್ಲ ಸಾರ್. ಏನಂತ ಇಡುವುದು' ಎಂದು ಪ್ರಶ್ನಿಸಿದರು. 'ಕಿವಿ ಕಳಕೊಂಡ ಇವನಿಗೆ ಕರ್ಣ ಎಂದು ನಾಮಕರಣ ಮಾಡಿದರೆ ಹೇಗೆ' ಎಂದೆ. ಮಹಾಭಾರತದಲ್ಲಿ ಕರ್ಣ ತನ್ನ ಕಿವಿಯ ಕರ್ಣ ಕುಂಡಲ ಕತ್ತರಿಸಿ ಕೊಡುವ ಪ್ರಸಂಗ ವಿವರಿಸಿದೆ. ಖುಷಿಗೊಂಡ ಅಕ್ಷತಾ, 'ಚೆನ್ನಾಗಿದೆ ಸರ್. ಇವತ್ತಿಂದ ಇದೇ ಹೆಸರು ಕರೆಯೋಣ' ಎಂದು ನಕ್ಕರು.

ಆದರೆ, ಮುಂದಿನ ಹಲವಾರು ಸಲ ಕರ್ಣ ಸಿಕ್ಕಾಗೆಲ್ಲಾ ಮರದ ನೆರಳಲ್ಲಿ ನಿದ್ದೆ ಬಾರಿಸುವುದನ್ನೂ



ನೋಡಿನೋಡಿ ಸಾಕಾದ ನಾನು ಅಕ್ಷತಾಗೆ, 'ರೀ ಬರೀ ಕರ್ಣ ಎಂದರೆ ಇವನಿಗೆ ಸಾಕಾಗಲ್ಲ. ಇನ್ಮೇಲೆ ಕುಂಭಕರ್ಣ ಅಂತ ಹೆಸರು ಬದಲಾಯಿಸೋಣ. ಯಾವಾಗ ನೋಡಿದ್ರೂ ಬರೀ ನಿದ್ದೆ ಜಡೀತಾನೆ ಇರ್ತಾನೆ. ನೈಟ್ ಡ್ಯೂಟಿಗೆ ಹೋಗಿ ಬಂದೋರಂಗೆ ನಿದ್ದೆ ತೆಗೀತಾನೆ' ಎಂದೆ. 'ಹೌದು ಸರ್. ಇಷ್ಟು ಸೋಂಬೇರಿ ಚಿರತೇನಾ ನಾನು ನನ್ನ ಸರ್ವೀಸಲ್ಲೇ ನೋಡಿಲ್ಲ' ಎಂದು ನಕ್ಕರು.

ನಾ ಕಂಡಂತೆ ಚಿರತೆಗಳು ಬಲು ಚುರುಕು ಮತ್ತು ಚಾಲಾಕು. ತಪ್ಪಿಸಿಕೊಂಡು ಓಡುವುದರಲ್ಲಿ ನಿಸ್ಸೀಮವಾದವು. ನಾಚಿಕೆ ಸ್ವಭಾವಂತೂ ಇದ್ದೇ ಇದೆ. ಕೆಲವಷ್ಟೇ ಚಿರತೆಗಳು ಪ್ರವಾಸಿಗರ ನೋಡಿ ನೋಡಿ ಅಭ್ಯಾಸವಾಗಿ ಕ್ಯಾರೇ ಎನ್ನದೆ ಓಡಾಡಿಕೊಂಡಿರುತ್ತವೆ. ನೀವು ನಿಮ್ಮ ಮನೆಯ ಬೆಕ್ಕಿನ ಚಲನವಲನ ಸರಿಯಾಗಿ ಗಮನಿಸಿದ್ದರೆ ಚಿರತೆಯನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು.

ನಾನು ಹೆಸರಿಟ್ಟ ಸುದ್ದಿ ಕೇಳಿದ ಡ್ರೈವರ್ ಅಶೋಕಣ್ಣ 'ಸಾರ್ ನಾನು ಮೊದ್ಲೇ ಅದುಕ್ಕೆ ನಾಮಕರಣ ಮಾಡಿ ಆಗೀತ್ತಲ್ಲ!' ಎಂದು ಮರುಗಿದರು. 'ಆಗಲಿ ನೀವೇನು ಹೆಸರು ಮಡುಗಿದ್ದೀರಿ ಅದ್ನೂ ಹೇಳಿ' ಎಂದೆ. 'ಕಿವಿ ಇಲ್ವಲ್ಲ, ಅದುಕ್ಕೆ ಕೆಪ್ಪ ಅಂತ ಹೆಸ್ರು ಇಕ್ಕಿದ್ದೀನಿ' ಎಂದು ಗಹಿಗಹಿಸಿ ನಕ್ಕರು. 'ಥೂ ಅಂದೆಂಥಾ ಹೆಸರು. ಅಂಗವೈಕಲ್ಯ ಅವಹೇಳನ ಮಾಡುವ ಹೆಸ್ರು ಸರಿಯಲ್ಲ' ಎಂದೆ. 'ಮತ್ತೆ ನೀವು ಇಷ್ಟು ದಿನದಿಂದ ಕರಿಯಾ ಅಂತ ಕರೀತ್ತಿದ್ರಲ್ಲಾ? ಅದೂ ತಪ್ಪಲ್ಲವಾ?' ಎಂದು ತಾವೂ ಕಪ್ಪಗಿರುವ ಅಶೋಕಣ್ಣ ರಪ್ಪಂತ ಪ್ರಶ್ನಿಸಿದರು. 'ಹೌದು ನೀವೇಳುವುದು ಸರಿ ಇದೆ. ನಂದೂ ತಪ್ಪಿದೆ' ಎಂದು ದುಸರಾ ಮಾತಿಲ್ಲದೆ ಒಪ್ಪಿದೆ.

ಶಿಕಾರಿ ಮಾಡಲು ಗೌರಿಕೆರೆ ಪ್ರದೇಶದ ಕಡೆ ನಡೆದು ಹೋಗುವ ಕರ್ಣ ಮಲಗಲು ತಣ್ಣಗೆ ಗಾಳಿ ಬೀಸುವ ಡ್ಯಾಮಿನ ನೀರಿನ ಕಡೆ ಬರುತ್ತಿದ್ದ. ಇಲ್ಲಿ ಸೃಷ್ಟಿಯಾಗಿರುವ ಅನೇಕ ಕೊರಕಲುಗಳು ಅವನಿಗೆ ಹೇಳಿ ಮಾಡಿಸಿಟ್ಟ ಬೆಡ್ ರೂಮುಗಳಾಗಿವೆ. ಹುಲಿಯ ಸಂಚಾರವೂ ಈ ಚಿನ್ನದ ಗಣಿ ಎಂಬ ಜಾಗೆಯಲ್ಲಿ ಇಲ್ಲದ ಕಾರಣ ಕರ್ಣ ತನ್ನ ಸ್ವನೆಲೆಯನ್ನು ಇಲ್ಲಿ ಗಟ್ಟಿ ಮಾಡಿಕೊಳ್ಳುತ್ತಿದ್ದಾನೆ. ಬಿಸಿಲಿಂದ ಬಚಾವಾಗಿ,